## ಕರ್ನಾಟಕ ಸರ್ಕಾರ

## ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

ವಾದಿಗಳು ಪ್ರತಿವಾದಿಗಳು

| | |
|---|---|
| 1.ರಾಜೇಶ ತಂದೆ ಮಗನ್ ಲಾಲ್ ಜೈನ್<br>2.ಪಿ.ಹನುಮಂತು ತಂದೆ ಪಿ.ನಾಗಪ್ಪ | 1.ಕಂದಾಯ ಪರಿವೀಕ್ಷಕರು ಕಮಲಾಪುರ<br>2.ಗ್ರಾಮ ಲೆಕ್ಕಾಧಿಕಾರಿ ಕಮಲಾಪುರ |

### ಪೀಠಿಕೆ

ಈ ಪ್ರಕರಣಕ್ಕೆ ಸಂಭಂಧಿಸಿದಂತೆ ಹೊಸಪೇಟೆ ತಾಲೂಕಿನ ಕಮಲಾಪುರ ಹೋಬಳಿಯ ಮಲಪನಗುಡಿ ಗ್ರಾಮದ ಸ.ನಂ.289/A ವಿ.0.91ಸೆಂಟ್ಸ ಜಮೀನನ್ನು ಪಟ್ಟಾ ಹೊಂದಿದ ರಾಜೇಶ ತಂದೆ ಮಗನ್ ಲಾಲ್ ಜೈನ್ 19 ನೇ ವಾರ್ಡ ಹಳೇ ಮೇದಾರ ರೋಡ್,ಕುರುಬರ ಓಣಿ ಹೊಸಪೇಟೆ ಇವರು ದಿನಾಂಕ 27-1-2016 ರಂದು ಖಂಡಿತ ಕ್ರಯಕ್ಕೆ ಡಾ.ನಂ.6027/15-16 ರ ಪ್ರಕಾರ ಸದರಿ ಹೊಸಪೇಟೆ ತಾಲೂಕಿನ ಕಮಲಾಪುರ ಹೋಬಳಿಯ ಕಮಲಾಪುರ ಗ್ರಾಮದ ವಾಸಿಯಾದ ಪಿ.ಹನುಮಂತು ತಂದೆ ಪಿ.ನಾಗಪ್ಪಯವರಿಗೆ ನೀಡಿರುತ್ತಾರೆ.ಇದರ ಪ್ರಯುಕ್ತ ಹಕ್ಕು ಬದಲಾವಣೆ ಮಾಡಿಕೊಳ್ಳಲು ದಿನಾಂಕ 28/1/2016 ರಂದು ಹಕ್ಕು ಬದಲಾವಣೆಗಾಗಿ ಪ್ರಸ್ತಾವನೆಯನ್ನು ಕಂದಾಯ ಪರೀವಿಕ್ಷಕರು ಕಮಲಾಪುರ ಇವರಿಗೆ ಕಳಿಸಲಾಗಿ ಸದರಿ ಪ್ರಕರಣವನ್ನು ಹಕ್ಕು ಬದಲಾವಣೆಗಾಗಿ ಕೈಗೆತ್ತಿಕೊಂಡು ಹಕ್ಕು ಬದಲಾವಣೆ ಸಂಖ್ಯೆ MR-38/2015-16 ದಿನಾಂಕ 29-2-2016 ರಂದು ಆದೇಶ ಮಾಡಲು ಕೈಗೆತ್ತಿಕೊಂಡಾಗ ಸದರಿ ಪ್ರಕರಣದಲ್ಲಿ ಚೆಕಲೀಸ್ಟನಲ್ಲಿ ಹಕ್ಕು ಬದಲಾವಣೆ ಪಡೆದವರ ಹೆಸರು ಪಿ.ಹನುಮಂತು ತಂದೆ ಪಿ.ನಾಗಪ್ಪ ತಂದೆ ಪಿ.ನಾಗಪ್ಪ ಎಂದು ತಂದೆ ಹೆಸರು ಎರಡು ಸಲ ಬಂದಿದ್ದರಿಂದ ಕಂದಾಯ ಪರೀವೀಕ್ಷಕರು ಕಮಲಾಪುರ ಇವರ ಹೆಸರು ಪುನಾರವರ್ತನೆ ಆಗಿದ್ದರಿಂದ ಈ ಪ್ರಕರಣವನ್ನು ಮುಂದಿನ ಕ್ರಮಕ್ಕೆ ತಹಶೀಲ್ದಾರರು ಹೊಸಪೇಟೆಯವರಿಗೆ ಕಳುಹಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 3-6-2016 ರಂದು ಪ್ರಾರಂಭಿಸಿ ದಿನಾಂಕ 9-6-2016 ರಂದು ಅಂತಿಮಗೊಳಿಸಲಾಯಿತು.

ಪ್ರಕರಣದಲ್ಲಿ ವಿಚಾರಣೆಗೆ ಕರೆ ಮಾಡಲಾಗಿ ವಾದಿ ಮತ್ತು ಪ್ರತಿವಾದಿಗಳು ಹಾಜರಿದ್ದು ವಿಚಾರಣೆಯಲ್ಲಿ ನಮೂನೆ 21 ಚೆಕಲೀಸ್ಟನಲ್ಲಿ ಹಕ್ಕು ಬದಲಾವಣೆ ಪಡೆದರ ಹೆಸರು ಪಿ.ಹನುಮಂತು ತಂದೆ ಪಿ.ನಾಗಪ್ಪ ತಂದೆ ಪಿ.ನಾಗಪ್ಪ ಎಂದು ಎರಡು ಸಲ ಕಣ್ ತಪ್ಪಿನಿಂದ ಎರಡು ಸಲ ಪುನರಾವರ್ತನೆಯಿಂದ ತಪ್ಪಾಗಿರುತ್ತದೆ.ಆದರೆ ಕ್ರಯ ಪತ್ರ ಡಾ.ನಂ.6027/15-16 ಪತ್ರದಲ್ಲಿ ಕ್ರಯಕ್ಕೆ ತೆಗೆದುಕೊಂಡುವರು ಪಿ.ಹನುಮಂತು ತಂದೆ ಪಿ.ನಾಗಪ್ಪ ಎಂದು ಇರುತ್ತದೆ.ಹಾಗೂ ಸ.ನಂ.289/B2 ವಿ.0.91 ಸೆಂಟ್ಸ ಜಮೀನು ಪಹಣಿ ಕಾಲಂ9ರಲ್ಲಿ ಪಿ.ಹನುಮಂತು ತಂದೆ ಪಿ.ನಾಗಪ್ಪ ಎಂದು ಇದ್ದುದ್ದರಿಂದ ಕ್ರಯ ಪತ್ರದ ಪ್ರಕಾರ ಕ್ರಯದಾರರಾದ

ಪಿ.ಹನುಮಂತು ತಂದೆ ಪಿ.ನಾಗಪ್ಪ ಕಮಲಾಪುರ ಇವರ ಹೆಸರಿನಲ್ಲಿ ಹ.ಬ ಮಾಡಲು ಆದೇಶಿಸಬಹುದಾಗಿದೆ. ಆದ್ದರಿಂದ ಈ ಕೆಳಗಿನಂತೆ

ಸಂ/ಕಂ/ಪಹಣಿ.ತಕರಾರು/35/16-17 ದಿನಾಂಕ 20-7-2016

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಹಾಗೂ ವಾಸ್ತವಂಶದ ಹಿನ್ನಲೆಯಿಂದಾಗಿ ಹೊಸಪೇಟೆ ತಾಲೂಕಿನ ಕಮಲಾಪುರ ಹೋಬಳಿಯ ಮಲಪನಗುಡಿ ಗ್ರಾಮದ ಸ.ನಂ.289A ಎ.0.91 ಸೆಂಟ್ಸ ಜಮೀನನ್ನು ಕ್ರಯದಾರರಾದ ಪಿ.ಹನುಮಂತು ತಂದೆ ಪಿ.ನಾಗಪ್ಪ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಯಿತು.

ಈ ಆದೇಶವನ್ನು ದಿನಾಂಕ 20-7-2016 ರಂದು ಉಕ್ತ ಲೇಖನ ನೀಡಿ ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು,ಹೊಸಪೇಟೆ.

ಗೆ,

ವಾದಿ ಮತ್ತು ಪ್ರತಿವಾದಿಗಳಿಗೆ

ಪ್ರತಿ ರಾ.ನಿ.ಕಮಲಾಪುರ

ಭೂಮಿ ಕೇಂದ್ರ ತಾಲೂಕು ಕಛೇರಿ ಹೊಸಪೇಟೆ